

## ಮಾರ್ಗದರ್ಶಿ ಲೇಖನ

‘ಗ್ರಾಮರಾಜ್ಯರಾಮರಾಜ್ಯ’ (ಏ. 29ರ ಸಂಚಿಕೆ) ಅತ್ಯಂತ ವಿಸ್ತೃತವೂ ಸ್ಫೂರ್ತಿದಾಯಕವೂ ಆಗಿದೆ. ಇಂಥ ಮಾಹಿತಿಪೂರ್ಣ ಲೇಖನ ಬರೆದ ಗುರುರಾಜ್ ಎಸ್. ದಾವಣಗೆರೆ ಅವರಿಗೆ ಅಭಿನಂದನೆ. ಇಷ್ಟಾದರೂ, ಪಂಚಾಯತ್ ರಾಜ್ ವ್ಯವಸ್ಥೆ ಆರಂಭವಾದ ದಿನಕ್ಕೂ ಇಂದಿಗೂ ಬಹಳವೇ ವ್ಯತ್ಯಾಸಗಳನ್ನು ಕಾಣಬಹುದಾಗಿದೆ. ಗ್ರಾಮೀಣ ಭಾಗದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ‘ರಾಜಕೀಯರಹಿತ’ವಾಗಿಲ್ಲದಿರುವುದು ವಿಷಾದನೀಯ. ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ಖರ್ಚು ಮಾಡುವ ಪರಿ ಹಾಗು ಗ್ರಾಮೀಣ ಭಾಗದ ಅಭಿವೃದ್ಧಿಯನ್ನು ತುಲನೆ ಮಾಡಿದರೆ ಈ ಆಡಳಿತ ವ್ಯವಸ್ಥೆಯ ಮತ್ತೊಂದು ಮುಖ ಅನಾವರಣವಾಗುತ್ತದೆ.

—ರಾಜೀವ್ ಎನ್. ಮಾಗಲ್, ಸಕಲೇಶಪುರ

ಲೇಖನ ಬಹಳ ಮೆಚ್ಚುಗೆಯಾಯ್ತು. ನಾನು ಕಂಡಂತೆ ಕರ್ನಾಟಕದಲ್ಲಿ ಗ್ರಾಮಪಂಚಾಯಿತಿಗಳು ನಿಷ್ಕ್ರಿಯವಾಗಿವೆ. ಕೇವಲ ರಾಜಕೀಯದಲ್ಲಿ ಮುಳುಗಿ ಹಳ್ಳಿಗಳನ್ನು ಮರೆತಿವೆ.

—ಗುರುರಾಜ್ ಡಿ.

ಲೇಖಕರು ಚಿತ್ರಿಸಿರುವ ದೇಶದ 14 ಗ್ರಾಮಪಂಚಾಯಿತಿಗಳ ಹೆಚ್ಚುಗಾರಿಕೆ ಬೇರೆ ಗ್ರಾಮಪಂಚಾಯಿತಿಗಳಿಗೆ ಮಾದರಿ! ಲೇಖಕರ ಪರಿಶ್ರಮಕ್ಕೆ ಅಭಿನಂದನೆಗಳು. ಇಂಥ ಮಾರ್ಗದರ್ಶಿ ಲೇಖನಗಳನ್ನು ಪ್ರಕಟಿಸಿ ‘ಸುಧಾ’ ತನ್ನ ಮೌಲಿಕತೆಯನ್ನು ಹೆಚ್ಚಿಸಿಕೊಳ್ಳುತ್ತಿದೆ.

—ಮಾಲತಿ ಪಟ್ಟಣಶೆಟ್ಟಿ, ಧಾರವಾಡ

## ನೀ...ರಿರಲು ಮನೆಯಲ್ಲಿ...



ನಳಿನಿ ಟಿ. ಭೀಮಪ್ಪ ಅವರ ‘ನೀ...ರಿರಲು’ ಪ್ರಬಂಧ ಲಘು ಹಾಸ್ಯದೊಂದಿಗೆ ಆಗಿನ ವಾಸ್ತವದ ಸಂಪೂರ್ಣ ಮಾಹಿತಿ ಒದಗಿಸಿದೆ. ನೀರಿನ ಬವಣೆ ಈಗಿಲ್ಲ ಎನ್ನುವುದು ಸಂತೋಷದ ಸಂಗತಿ.

—ಸುಮನಾ

ಪ್ರಬಂಧ ಓದಿದಾಗ ನಾನೂ ನಲವತ್ತೊಂದು ವರುಷ ಹಿಂದೆ ಹೋದೆ. ಸಮೃದ್ಧ ನೀರು ದೊರಕುತಿದ್ದ ಮಂಗಳೂರಿನಿಂದ ಹೋದ ನನಗೆ ನೀರಿನ ಬವಣೆಯ ನಿಜ ಚಿತ್ರಣದ ಅರಿವಾದುದು ದುರ್ಗದಲ್ಲೇ! ಕರವಸ್ತ್ರ ಒಗೆಯಲೂ ಬಕೆಟ್ ನೀರು ಬಳಸಿ ಅಭ್ಯಾಸವಾಗಿದ್ದ ನನಗೆ ನೀರಿನ ಮಹತ್ವ ತಿಳಿಸಿದ್ದು ದುರ್ಗವೇ! ಲೇಖಕಿ ನೀರಿನ ಕುರಿತು ಬರೆದುದು ಇಂಚಿಂಚೂ ಸತ್ಯವೇ ಹೌದು. ಬೀದಿಬದಿಯಲ್ಲಿ ನಡೆಯುತಿದ್ದ ಅವೆಲ್ಲಾ ಘಟನೆಗಳು ಈಗಲೂ ಕಣ್ಣಿಗೆ ಕಟ್ಟಿದಂತಿದೆ.

—ಪಿ. ವಾಸುದೇವ್ ಭಟ್, ಉಡುಪಿ

ಬಾಲ್ಯದ ನೆನಪು ಮರುಕಳಿಸಿತು. ನಮ್ಮ ತಾಯಿ ಹಾಗೆ ತೊಟ್ಟಿಯಲ್ಲಿ, ಹಂಡೆಗಳಲ್ಲಿ, ಪಾತ್ರೆಗಳಲ್ಲಿ, ಕೊಡದಲ್ಲಿ ನೀರು ತುಂಬಿಸುತ್ತಿದ್ದರು. ಪ್ರಬಂಧ ಓದುವಾಗ ನಮ್ಮ ಊರು, ನಮ್ಮ ಬಾಲ್ಯ, ನಮ್ಮ ಏರಿಯಾ ನನ್ನ ಕಣ್ಣು ಮುಂದೆ ಬಂದು ಮೊಗದಲ್ಲಿ ಸಣ್ಣ ಕಿರುನಗೆ ಮೂಡಿಸಿದವು.

—ಅಂಜನಾ ಸಜ್ಜನರ್, ಬೀರೂರು

ಇಪ್ಪತ್ತು ವರ್ಷಗಳ ಹಿಂದೆ ನಾನು ಪಟ್ಟ ಬವಣೆಯನ್ನು ನೆನಪಿಸಿದ ಪ್ರಬಂಧ.

—ಜನೆಟ್ ವತ್ಸಲಾ

ಲೇಖನ ಬಹಳಷ್ಟು ಚೆನ್ನಾಗಿದೆ. ಹಾರ್ದಿಕ ಅಭಿನಂದನೆಗಳು.

—ಮಹದೇವಸ್ವಾಮಿ, ತುಮಕೂರು

ರಾಮರಾಜ್ಯದ ಕಲ್ಪನೆ ಸ್ಪಷ್ಟ ಆಯಾಮ ತಾಳಲು ಗ್ರಾಮಗಳು ಬಲಗೊಳ್ಳಬೇಕಿದೆ. ಇಂದು ಗ್ರಾಮ ಪಂಚಾಯಿತಿಗಳು ಸ್ವಹಿತಾಸಕ್ತಿ, ಸ್ವಜನಪಕ್ಷಪಾತ ಒಣಪ್ರತಿಷ್ಠೆ ಕೇಂದ್ರವಾಗಿ ಬಿಂಬಿತಗೊಂಡಿವೆ. ಎಲ್ಲಾ ಪಂಚಾಯಿತಿಗಳು ಲೇಖಕರು ವಿವರಿಸಿದ ರೀತಿ ಕೆಲಸ ಮಾಡಿದರೆ ರಾಜಕೀಯ ಪೋಕರಿಗಳಿಗೆ, ಬಹುಕೋಟಿ ಕಂಪನಿಗಳಿಗೆ ಸಲಾಂ ಹೊಡೆಯುವ ಅವಶ್ಯಕತೆ ಇರುವುದಿಲ್ಲ.

—ವಿದ್ಯಾ ಶೆಣೈ, ಕುಂದಾಪುರ

ಲೇಖನ ಓದಿ ಕಣ್ಣು ತುಂಬಿ ಮನ ತುಂಬಿತು. ಇಂತಹ ಸಾಧಕರ ಸಾಧನೆಯ ಬದುಕು ಆದರ್ಶ ಅನುಕರಣೀಯ. ಪ್ರತಿ ಸಂಚಿಕೆಯಲ್ಲೂ ಇಂತಹ ಲೇಖನಗಳು ಬಂದರೆ ಸೊಗಸು.

—ರವಿಕುಮಾರ್, ಬೆಂಗಳೂರು



## ಬೆಳಕಿನ ಬೆಳೆಗಾರ

ಸ್ವಾಭಿಮಾನಿ, ಹಟಗಾರ, ಕಠಿಣ ಶಿಸ್ತು, ಸಮಯ ಪ್ರಜ್ಞೆ ಮತ್ತು ಸಮರ್ಪಣಾ ಮನೋಭಾವದ ಅಖಂಡ ವ್ಯಕ್ತಿತ್ವ ವಿ.ರಾಮಮೂರ್ತಿ ಅವರದ್ದು. ಏ. 29ರ ಸಂಚಿಕೆಯಲ್ಲಿ ಗುಡಿಹಳ್ಳಿ ನಾಗರಾಜ ಅವರು ಬರೆದ ಲೇಖನ ಓದಿ ರಾಮಮೂರ್ತಿ ಅವರೊಂದಿಗಿನ ಒಡನಾಟದ ನೆನಪು ಒತ್ತರಿಸಿಕೊಂಡು ಬಂತು. ತಮ್ಮ ಪಾಲಿನ ಕೆಲಸವನ್ನು ಪ್ರಾಮಾಣಿಕವಾಗಿ ಮುಗಿಸಿ, ಎಂದೆಂದೂ ಬಾರದ ಊರಿಗೆ ಹೋದ ಅವರೀಗ ನೆಲೆ ನಿಂತಿರುವುದು ನನ್ನ ಮನಃಪಟಲದಲ್ಲಿ.

—ಹೊರೆಯಾಲ ದೊರೆಸ್ವಾಮಿ, ಮೈಸೂರು

ಬೆಳಕಿನ ಬೆಳೆಗಾರ ವಿ. ರಾಮಮೂರ್ತಿ ಕುರಿತ ಲೇಖನ ಚೆನ್ನಾಗಿತ್ತು. ಒಂದಾನೊಂದು ಕಾಲದಲ್ಲಿ ಕನ್ನಡ ಚಿತ್ರದಲ್ಲೂ ಅವರು ಒಂದು ಚಿಕ್ಕ ಪಾತ್ರ ಮಾಡಿದ ನೆನಪು ಹಸಿರಾಗಿದೆ.

—ಮೂರ್ತಿ, ಕಾಸರಗೋಡು

ರಾಮಮೂರ್ತಿ ಬೆಳೆದು ಬಂದ ದಾರಿಯನ್ನು ಲೇಖನ ಚೆನ್ನಾಗಿ ಚಿತ್ರಿಸಿದೆ. ನಾಟಕದ ಬೆಳಕಿಗೆ ಮಾಡಿರುವ ಸೇವೆ ತುಂಬಾ ಅಪಾರವಾದದು.

—ನರಸಿಂಹರಾವ್, ಬೆಂಗಳೂರು

## ಪರಿಣಾಮಕಾರಿ ಅಡೋಬ್

‘ಪರಿಣಾಮಕಾರಿ ವಿಡಿಯೊಗೆ ಅಡೋಬ್’ (ಲೇ: ಶಶಿಕುಮಾರ್ ಸಿ.) ಏ.22ರ ಸಂಚಿಕೆಯ ಲೇಖನ ಓದಿದಾಗ, ಇತ್ತೀಚೆಗೆ ರಾಜ್ಯದ ರಾಜಕೀಯವನ್ನು ತಲ್ಲಣಗೊಳಿಸಿದ ಪರಿಣಾಮಕಾರಿ ವಿಡಿಯೊಗಳನ್ನು ಇದೇ ತಂತ್ರಜ್ಞಾನದ ಮೂಲಕ ರಚಿಸಿರಬಹುದೇ ಎಂಬ ಸಂದೇಹ ಮೂಡಿತು!

—ಜೀವನ್, ಬಾಗಲಕೋಟೆ

## ದಿಸ್ ಪೀಪಲ್ ವಿಲ್ ನೆವರ್ ಚೇಂಜ್

ಚಿಕ್ಕ ಮಕ್ಕಳೊಂದಿಗೆ ತಾಯಿಯ ಪಯಣದ ಸಮಸ್ಯೆಯನ್ನು ನಂದಿನಿ ಹೆದ್ದುರ್ಗರವರು ‘ದಿಸ್ ಪೀಪಲ್ ವಿಲ್ ನೆವರ್ ಚೇಂಜ್’ ಎಂಬ ಪ್ರಬಂಧದಲ್ಲಿ ನಿರೂಪಿಸಿದ್ದಾರೆ. ಒಮ್ಮೆ ವೋಲ್ವೊ ಬಸ್ಸಿನಲ್ಲಿ ಪ್ರಯಾಣಿಕರೊಬ್ಬರು ತುರ್ತು ಮೂತ್ರ ವಿಸರ್ಜನೆಗೆಂದು ಬಸ್ ನಿಲ್ಲಿಸುವಂತೆ ಕೋರಿದಾಗ ಕಂಡಕ್ಟರ್, ‘ಇದನ್ನೆಲ್ಲಾ ನೀವು ಮೊದಲೇ ಮುಗಿಸಿಕೊಂಡು ಬರ್ಬೇಕು. ಇದು ಎಕ್ಸ್‌ಪ್ರೆಸ್. ಕೇಳಿದ ಕಡೆ ಎಲ್ಲಾ ನಿಲ್ಸೊ ಹಂಗಿಲ್ಲ’ ಎಂದ. ಆ ಹಿರಿಯರು ತಡೆಯಲಾರದೆ ಮತ್ತೆ ಬೇಡಿಕೊಂಡರು. ಕಂಡಕ್ಟರ್ ಸೀಟಿ ಊದಿದ. ಡ್ರೈವರ್ ಗೊಣಗಾಡಿ ಅರ್ಧ ಮೈಲಿ ದೂರ ಹೋಗಿ ಬಸ್ ನಿಲ್ಲಿಸಿದ. ‘ದಿಸ್ ಪೀಪಲ್ ವಿಲ್ ನೆವರ್ ಚೇಂಜ್’ ಈ ಘಟನೆಯನ್ನು ಮತ್ತೆ ನೆನಪು ಮಾಡಿಕೊಟ್ಟಿತು.

—ಎಂ.ಟಿ. ಮಂಜುನಾಥ್, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in